ಕಣ್ಣೀರಿಳಿದು ಬಾನಿಯೊಳಗೆ ಬಿದ್ದು ಅಲೆಯುಂಟಾಗಿ ಚಿತ್ರ ಮಾಯವಾಗಿತು.

ಊಟ ಮುಗಿಸಿ ಕೈತೊಳೆಯುತ್ತಾ ಬೀರಪ್ಪ, 'ಅಣ್ಣಾ ತಿಮ್ಮನಕಟ್ಯಾಗ ಒಬ್ರು ಸ್ವಾಮ್ಯಾರು ಅದಾರ ಹಿಂಗ್ ಕಳದೋದ್ ದನಾನ ಇಲ್ಲೇ ಅದಾವು, ಇವ್ರ ಒಯ್ದಾರ ಅಂತಾ ಕಡ್ಡಿ ಮುರದಂಗ ಹೇಳತಾರಂತ. ನೀ ಹೂ ಅಂದ್ರ ಹೋಗಿ ಬರಾನ ನಡಿ, ಹಿಂಗ ಕುಂತ ಕೆಲಸಾ ಆಗಲ್ಲ ಇದು' ಎಂದು ನಿಂಗಪ್ಪನನ್ನು ಹುರಿದುಂಬಿಸಿದ. 'ಯಪ್ಪಾ ಯಾರು ಯಾಕಾರ ಆಗವಲ್ಲೇನು ನನಗೆ ನನ್ನ ದನಾ ಸಿಕ್ಕರ ಸಾಕು ನಡಿ ಹೋಗಾನ' ಎಂದು ಬೀರಪ್ಪನಿಗೆ ಹೇಳಿದ. ಮಲ್ಲವ್ವ, 'ಅಷ್ಟ್ ಕಂಡ್‌ತುಂಡ್ ಯಾರ್ ಹೇಳ್ತರ್ತಮ್ಮಾ ಇವತ್ತೂ?' ಕೇಳಿದಳು. ಅಂಬವ್ವ, 'ಮತ್ತ ಸರೋಜಮ್ಮ ಹಿಂಗ್ ಹೇಳೆತಲ್ಲ' ಎಂದು ಪ್ರಶ್ನೆಯಿಟ್ಟಳು.

ಮಲ್ಲವ್ವ, 'ನಿನ್ನ ಕೆಲಸಾ ನೀ ಮಾಡು, ಅವರ ಕೆಲಸಾ ಅವರ ಮಾಡ್ಲಿ. ಯಾರ ಹೇಳಿದ್ರೂನು ಮಾಡಿದ್ರೂನು ಹಗರಕ್ ಕೆಲಸಾ ಆಗಲ್ಲಾ. ಅವರ್ರ ಪ್ರಯತ್ನ ಮಾಡ್ಲಿ ಬುಡು' ಎಂದಳು. ಅಂಬವ್ವ ನಿರುವಿಲ್ಲದೆ ಸುಮ್ಮನಾದಳು.



ಬೀರಪ್ಪ 'ಹಂಗಾರ ಒಂದ್ ಕೆಲಸಾ ಮಾಡ್ರಿ. ನಾನು, ಸುರೇಶಿ ಮತ್ತ ಸೀನು ಗಾಡಿ ತಗಂಡು ಹಂಗ್ ಸುತ್ತಾ ಮುತ್ತ ಅಡ್ಯಾಡಕ್ಯಂತ ವಿಚಾರಿಸ್ತವಿ. ನಿಂಗಪ್ಪಣಾ ನಿನಗ ತುಮ್ಮಿನಕಟ್ಟಿ ಅಡ್ರಸ್ ಕೊಡ್ತನಿ. ಸ್ವಾಮೇರ್ ಹತ್ರ ಹೋಗಿ ಬಾ ಹಂಗಾರ್' ಎಂದು ಕೆಲಸ ನಿರ್ಧರಿಸಿದ. ನಿಂಗಪ್ಪನಿಗೆ ಎಲ್ಲರ ಸಲಹೆಗಳಿಗೆ ತಯಾರಾಗುವುದನ್ನ ಬಿಟ್ಟರೆ ಏನೊಂದು ಯೋಚಿಸದಷ್ಟು ತಲೆ ಕೆಟ್ಟುಹೋಗಿತ್ತು. ಬೀರಪ್ಪನ ಟಿವಿಎಸ್ ಗಾಡಿ ಮೂವರನ್ನು ಹೊತ್ತುಕೊಂಡು ಕರ್ರೋ ಎಂದು ಹೊರಟಿತು. ಇತ್ತ ನಿಂಗಪ್ಪ ತುಮ್ಮಿನಕಟ್ಟಿಗೆ ಹೊರಡಲು ಅನುವಾಗಿ ಊರ ಪ್ಯಾಟಿಯ ಕಡೆಗೆ ಬಸ್‌ಗೆಂದು ಬಂದ. ಅಷ್ಟೊತ್ತಿಗೆ ಊರಿಗೆ ಊರೇ ನಿಂಗಪ್ಪನ ಎತ್ತು ಆಕಳ ಹೊಡಕಂಡ್ ಹೋಗಿರೋ ಸುದ್ದಿ ಚರ್ಚೆಗೇರಿತ್ತು. ಊರಿಗೇ ಊರೆ ಮಾತಾಡುವಷ್ಟು ಸುದ್ದಿಯಾದರೂ ನಿಂಗಪ್ಪನನ್ನು ಕಂಡ ತಕ್ಷಣ ಊರು ತಣ್ಣಗೆ ತನ್ನಪಾಡಿಗೆ ತಾನಾಗುತ್ತಿತ್ತು. ನಿಂಗಪ್ಪ ಬಸ್ ಹತ್ತಿ ಕುಳಿತ. ನಾನಾಬಗೆಯ ಯೋಚನೆಗಳು ಅವನನ್ನು ಬಾಧಿಸತೊಡಗಿದವು. ಯಾರು ಈ ಕೆಲಸಾ ಮಾಡಿರಬಹುದು ಎಂದೂ ಹೀಗಾಗಿರಲಿಲ್ಲ. ಇಪ್ಪತ್ತೈದು ವರ್ಷದಿಂದ ಆಗಲಾರದವು ಈಗೆ ಹಿಂಗೆ. ಇಷ್ಟು ವರ್ಷದಲ್ಲಿ ಎಷ್ಟು ಎತ್ತುಗಳ ಬದಲು ಮಾಡೇನಿ ಯಾರರ ಮ್ಯಾಲ ಅನುಮಾನ ಪಡಾಕೆ ನಾನ್ಯಾರಿಗೂ ಅನ್ಯಾಯ ಮಾಡಿಲ್ಲ. ಇನ್ನ ಯಾರಿಗೂ ನಾ ಶತ್ರು ಅಂತ ಅನಕಂಡಿಲ್ಲ ಎಂದು ಯೋಚಿಸುತ್ತಲೆ, 'ನಿನಗೆ ಯಾರ ಬೇಕಂತಾನ ಹೊಲ ಬಿಡಸಬೇಕು ಅಂತಾ ಹಿಂಗ ಮಾಡ್ಯಾರ' ಅಂತಾ ಬೀರಪ್ಪ ಅಂದದ್ದು ತಟಕ್ಕನೆ ಹೊಳೆಯಿತು. ಯಾರಿರಬಹುದು? ಒಡೆಯನಾ ಹೀಗೆ ಮಾಡಿಸಿದ್ನಾ? ಥೆ! ಅವರ್ಯಾಕ ಮಾಡತಾರ? ಬ್ಯಾಡಾಗಿದ್ರ ನೀ ಇಷ್ಟ್ ದಿನ ಹೊಲ ಮಾಡಿದ್ ಸಾಕು ಬಿಡಪಾ. ನಾ ಬ್ಯಾರೇರಿಗೆ ಕೊಡತನಿ ಅಂತ ಹೇಳತುದ್ರು. ಬೌಶಾ ಪಕ್ಕದ ಹೊಲದ್ ಲಾವಣಿ ಹಕ್ಯಂಡ್ ಸಿದ್ದಪ್ಪ ಇದೊಂದ್ ಐದೆಕರೆ ನನಗ ಸಿಕ್ರ ಸಾಕು, ನನ್ನನ್ ಹೊಲ ಮಾಡದ ಬಿಡಸಬಕಂತಾ ಹಿಂಗ್ ಮಾಡಿದ್ನಾ? ಹೇ ಸಿದ್ದಪ್ಪನ್ ಚಾಳಿ ಸುಮಾರಿದ್ರೂ ಔನು ಇಂತ ಕೆಲಸಕ್ಕ ಕೈ ಹಾಕಲ್ಲ ತಗಿ ಇನ್ಯಾರ್ ಹಿಂಗ್ ಮಾಡ್ಯಾರ' ಎಂದು ಯೋಚಿಸುತ್ತಾ ತುಮ್ಮಿನಕಟ್ಟೆ ಬಂದಿದ್ದು ಅರಿವಿಗೆ ಬರಲಿಲ್ಲ. 'ಯಾರ್ರಿ ತಿಮ್ಮಿನಕಟ್ಟಿ ಬರ್ರಿ' ಎಂದು ಕಿನ್ನರ್ ಕೂಗಿದಾಗ ನಿಂಗಪ್ಪ ವಾಸ್ತವಕ್ಕೆ ಬಂದ. ಬಸ್ಸಿಳಿದು ಎದುರಿಗೆ ಕಾಣುತ್ತಿದ್ದ ಬೀಡಿಶೆಡ್ಡಿನ ಅಂಗಡಿಗೆ ಹೋಗಿ ಬೀರಪ್ಪ ಕೊಟ್ಟದ್ದ ವಿಳಾಸದ ಚೀಟಿ ತೋರಿಸಿದ. ಬೀಡಿಶೆಡ್ಡಿನ ವ್ಯಾಪಾರಿ ಇದ್ಯಾವದೊ ಊರಿಗೆ ಹೊಸಮುಖ ಕಂಡು, 'ಹಿಂಗಾ ಸೀದಾ ಹೋಗ್ರಿ. ಅಲ್ಲಿಂದ ಹನುಮಪ್ಪನ ಗುಡಿ ಐತಿ, ಅಲ್ಲಿಂದ ಎಡಕ್ಕೆ ಹೊಳ್ಳಿರಿ. ಐದನೆ ಮನೀನ ಅವರದು. ಗೊತ್ತಾಗಲಿಲ್ಲ ಅಂದ್ರ ಅಂಜನದ ರಾಮಣ್ಣನ ಮನಿ ಯಾವುದು ಅಂತಾ ಕೇಳ್ರಿ. ಸಣ್ಣ ಹುಡುಗ್ರು ಹೇಳತಾರ ಎಂದ. ಹುಂ ಸರಿ ಎಂದು ನಿಂಗಪ್ಪ ಅಂಜನದ ರಾಮಪ್ಪನ ಮನೆ ಕಡೆಗೆ ನಡೆಯಲಾರಂಭಿಸಿದ. ಹನುಮಪ್ಪನ ಗುಡಿಯ ಮುಂದೆ ಚಪ್ಪಲಿ ಬಿಟ್ಟು ಕೈಮುಗಿದು ನೀನರ